# ಪುರಂದರದಾಸರ ಉಗಾಭೋಗಗಳು

**contributed by Smt Vidhya Vishnu Kiran Bangalore**

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮುಕುತಿ ಪಥಕೀವ ಮನ ಮಹರುದ್ರ ದೇವರು
ಭಕುತಿದಾಯಕಳು ಸಿರಿ ಭಾರತಿದೇವಿ
ಯುಕುತಿ ಶಾಸ್ತ್ರಗಳಲ್ಲಿ ವನಜ ಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನಮತಿಯಿತ್ತು
ಪರಿಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದ ಸುಖವನೀವಳು ರಮಾ
ಭಕುತ ಜನರೊಡೆಯ ನಮ್ಮ ಪುರಂದರವಿಠಲನು
ಸತತ ಇವರಲಿ ನಿಂತು ಕೃತಿಯ ನಡೆಸುವನು ।

ಎರಗಿ ಭಜಿಪೆನು ನಿನ್ನ – ಚರಣ ಸನ್ನಿಧಿಗೆ
ಕರುಣದಿಂದಲಿ ನಿನ್ನ ಸ್ಮರಣೆಯ ಎನಗಿತ್ತು
ಮರೆಯದೆ ಸಲಹೋ ಶ್ರೀಪುರಂದರವಿಠಲ ।

ಅಪಾಯ ಕೋಟಿಗಳಿಗೆ ಉಪಾಯ ಒಂದೇ
ಹರಿಭಕ್ತರು ತೋರಿಕೊಟ್ಟ ಉಪಾಯ ಒಂದೇ
ಪುರಂದರವಿಠಲನೆಂದು ಭೋರಿಟ್ಟು
ಕರೆವ ಉಪಾಯವೊಂದೇ ।

ಹರಿ ನಿನ್ನ ನಾಮವ ಸ್ಮರಿಸಲು
ದುರಿತ ಪೀಡಿಪುದುಂಟೆ
ಅರಿತು ಭಜಿಪರಿಗೆಲ್ಲ ಕೈವಲ್ಯ ನಿನ್ನಯ
ಕರುಣವರಿತು ನನ್ನ ಮಗನ ಕೂಗಿದವಗೆ
ಮರಣಕಾಲದಿ ಒದಗಿದೆ ಶ್ರೀ ಪುರಂದರವಿಠಲ ।

ಇದೇ ಮುನಿಗಳ ಮನದ ಕೊನೆಯ ಠಾವು
ಇದೇ ಬ್ರಹ್ಮಾದಿಗಳ ಹೃತ್ಕಮಲ ಪೀಠ
ಇದೇ ದ್ವಾರಕೆ ಇದೇ ಕ್ಷೀರಾಂಬುಧಿ
ಇದೇ ಅರಿದ ಸುಜ್ಞಾನಿಗೆ ವೈಕುಂಠ
ಇದೇ ಪುರಂದರವಿಠಲನ ಮಂದಿರ ।

ಧನದಾಸೆ ದೈನ್ಯಪಡಿಸುತಿದೆ
ವನಿತೆಯರಾಸೆ ಓಡಾಡಿಸುತಿದೆ
ಮನದಾಸೆ ಮಂತ್ರವ ಕೆಡಿಸುತಿದೆ
ಮನೆವಾರ್ತೆಯಾಸೆ ಮನವ ಬಾಧಿಸುತಿದೆ
ಇನಿತರಾಸೆಯ ಬಿಡಿಸಿ ನಿನ್ನ ಚರಣಂಗಳ
ನೆನೆವಂತೆ ಮಾಡೋ ಪುರಂದರವಿಠಲ ।

ಒಬ್ಬರ ಬಂಟನಾಗಿ ಕಾಲಕಳೆವುದಕಿಂತ
ನಿರ್ಬಂಧವಿಲ್ಲದೆ ತನ್ನಿಚ್ಛೆಯೊಳಿದ್ದು
ಲಭ್ಯವಾದೊಂದು ತಾರಕ ಸಾಕು ಸಾಕು ಎನಗೆ
ಅಬ್ಬರ ಒಲ್ಲೆನಯ್ಯ ಅಷ್ಟರಲ್ಲೆ ಸಂತುಷ್ಟನಹೆನು
ಕರುಣಾಕರ ಪುರಂದರವಿಠಲ ।

ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ
ನಿನ್ನ ಸುತ್ತಿಹುದೆಲ್ಲ ಎನ್ನ ಮನವಯ್ಯ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನು
ಮೂರು ಜಗವು ನಿನ್ನೊಳಗೆ ನೀನು ಎನ್ನೊಳಗೆ
ಕರಿಯು ಕನ್ನಡಿಯಲ್ಲಿ ಅಡಗಿಪ್ಪ ತೆರನಂತೆ
ಎನ್ನೊಳು ಅಡಗಿದೆಯೊ ಪುರಂದರವಿಠಲ ।

ಹೊಲೆಯ ಬಂದಾನೆಂದು ಒಳಗೆ ದೇವರ ಮಾಡಿ
ಘಣ ಘಣ ಘಂಟೆ ಬಾರಿಸುತಾ
ತನುವಿನ ಕೋಪ ಹೊಲೆಯಲ್ಲವೇನಯ್ಯ
ಮನಸ್ಸಿನ ವಂಚನೆ ಹೊಲೆಯಲ್ಲವೇನಯ್ಯ
ಇಂಥಾ ಹೊರಗಿದ್ದ ಹೊಲೆಯನ್ನ ಒಳಗೆ ತುಂಬಿಟ್ಟುಕೊಂಡು
ಇದಕ್ಕೇನು ಮದ್ದು ಶ್ರೀ ಪುರಂದರವಿಠಲ ।

ಹ್ಯಾಂಗೆ ಬರೆದಿತ್ತೊ ಪ್ರಾಚೀನದಲ್ಲಿ ।
ಹಾಂಗೆ ಇರಬೇಕು ಸಂಸಾರದಲ್ಲಿ ॥
ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ ।
ಆ ಕ್ಷಣದಲಿ ಹಾರಿಹೋದಂತೆ॥
ನಾನಾಪರಿಯಲಿ ಸಂತೆ ನೆರೆದಂತೆ ।
ನಾನಾ ಪಂಥವ ಹಿಡಿದು ಹೋದಂತೆ ॥

ಮಕ್ಕಳಾಡಿ ಮನೆಕಟ್ಟಿದಂತೆ ।
ಆಟ ಸಾಕೆಂದು ಅಳಿಸಿ ಪೋದಂತೆ ॥
ವಸತಿಕಾರನು ವಸತಿ ಕಂಡಂತೆ ।
ಹೊತ್ತಾರೆ ಎದ್ದು ಹೊರಟುಹೋದಂತೆ ॥
ಸಂಸಾರಪಾಶವ ನೀಬಿಡಿಸಯ್ಯ ।
ಕಂಸಾರಿ ಪುರಂದರವಿಠಲರಾಯ ॥

Sri Krishnarpanamasthu